Medical Sub-Centres in Dharwar District

174. Sri B. G. BANAKAR (Hirekerur)—

Will the Minister for Health be pleased to state :—

(*a*) the total number of Medical Sub-Centres sanctioned in Dharwar District and the date on which they are sanctioned ;

(*b*) whether the Government is aware of the necessity of starting these centres to cater to the needs of the public in rural area ;

(*c*) the total number of Primary Health Centres existing in rural area in Dharwar District which are not having Lady Medical Officers ;

(*d*) the action the Government intend to take to provide better and effective medical aid to the people in rural areas ?

Sri H. SIDDAVEERAPPA (Minister for Health)—

(*a*) Four. Three on 4th July 1974 and one on 18th October 1974.

(*b*) Yes.

(*c*) Eleven.

(*d*) Government are providing adequate medical facilities in rural areas through the existing Medical Institutions. The question of up-grading one out of 4 P. H. Cs. and Taluk Level institutions in a phased manner during V Plan is under consideration of Government. One additional Primary Health Centre in Savanur Taluk has been recently sanctioned by Government. Budget allotment for drugs has also been enhanced.

ಶ್ರೀ ಬಿ. ಜಿ. ಬಣಕಾರ್.—ಧಾರವಾಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ 11 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಹಿಳಾ ವೈದ್ಯರಿಲ್ಲವೆಂದು ಒಪ್ಪಿಕೊಂಡಿದ್ದಾರೆ ಮೂರು ವರ್ಷಗಳಿಂದಲೂ ವೈದ್ಯರಿಲ್ಲದೆ ಅನೇಕ ಮಹಿಳಾ ರೋಗಿಗಳಿಗೆ ತೊಂದರೆಯಾಗಿರತಕ್ಕ ಸಂಗತಿ ಗೊತ್ತಿದೆಯೇ ? ಗೊತ್ತಿದ್ದ ಪಕ್ಷದಲ್ಲಿ ಮಹಿಳಾ ವೈದ್ಯರನ್ನು ಕಳುಹಿಸುವುದಕ್ಕೆ ಏನು ವ್ಯವಸ್ಥೆ ಮಾಡಲಾಗುತ್ತಿದೆ ಮತ್ತು ಇದಕ್ಕೆ ಪರಿಹಾರವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರೇ ಹುಡುಕಿ ಕೊಡಬೇಕು.

ಶ್ರೀ ಬಿ. ಜಿ. ಬಣಕಾರ್.—ನಾವು ಹುಡುಕಿ ಕೊಡುವುದಾದರೆ ತಾವೇಕೆ ಮಂತ್ರಿಗಳಾಗಿರಬೇಕು ?

ಶ್ರೀ ಎಚ್. ಸಿದ್ದವೀರಪ್ಪ.—ನಾನು ಅಪಾಯಿಂಟ್ ಮಾಡುವುದಕ್ಕೆ ತಯಾರಾಗಿದ್ದೇನೆ. ಗ್ರಾಮಾಂತರ ಪ್ರದೇಶಗಳಿಗೆ ಹೋಗುವುದಕ್ಕೆ ಸಿದ್ಧರಾಗಿದ್ದು ಬೇಕಾದ ಕ್ವಾಲಿಫಿಕೇಷನ್ ಇರುವವರು ಬಂದರೆ ನೌಕರಿ ಕೊಡುತ್ತೇನೆ. ಕೆಲವರು ಬರುತ್ತಾರೆ, ನೌಕರಿ ತೆಗೆದುಕೊಳ್ಳುತ್ತಾರೆ. ಹೋಗುವುದಿಲ್ಲ. ಎಲ್ಲರೂ ಬೆಂಗಳೂರು, ಮೈಸೂರು ಹತ್ತಿರವೇ ನೌಕರಿ ಬೇಕು ಎಂದು ಬರುತ್ತಾರೆ,

ಶ್ರೀ ಬಿ. ಜಿ. ಬಣಕಾರ್.—ಅವರ ಮೇಲೆ ನೀವು ಅಧಿಕಾರಿಗಳೋ ಅಥವಾ ನಿಮ್ಮ ಮೇಲೆ ಅವರು ಅಧಿಕಾರಿಗಳೋ ? ದೊಡ್ಡ ದೊಡ್ಡ ಊರುಗಳಲ್ಲಿರುವವರು ಗ್ರಾಮಾಂತರ ಪ್ರದೇಶಗಳಿಗೆ ಹೋಗುವುದಿಲ್ಲವೆಂದರೆ ಅವರನ್ನು ಮನೆಗೆ ಕಳುಹಿಸಿ. ಮೂರು ವರ್ಷಗಳಿಂದ ಮಹಿಳಾ ವೈದ್ಯರಿಲ್ಲದೆ ಜನರ ಬವಣೆ ಏನು ಎನ್ನುವದು ಗೊತ್ತಿದೆಯೇ ?

ಶ್ರೀ ಹೆಚ್. ಸಿದ್ದವೀರಪ್ಪ.—ಜನರ ಬವಣೆ ಮಾನ್ಯ ಸದಸ್ಯರಿಗಿಂತ ನನಗೆ ಹೆಚ್ಚಾಗಿ ಗೊತ್ತಿದೆ. ಇತ್ತೀಚೆಗೆ ವೈದ್ಯರನ್ನು ಕಳುಹಿಸುತ್ತಿದ್ದೇವೆ. ಹೋದ ತಿಂಗಳಲ್ಲಿ 147 ಜನರನ್ನು

ಗಲಾಚೆ ಮಾಡಿ ಕಳುಹಿಸಿದ್ದೇವೆ. ಬೆಂಗಳೂರು, ಮೈಸೂರು ನಗರಗಳಲ್ಲಿರುವವರು ಯಾರು ಹೋಗುವುದಿಲ್ಲವೆನ್ನುತ್ತಾರೆ ಅಂಥವರನ್ನು ನೌಕರಿಯಿಂದ ತೆಗೆಯುತ್ತೇವೆಂದು 15 ದಿವಸಗಳ ನೋಟೀಸ್ ಕೊಡಿ ಎಂದು ತಿಳಿಸಿದ ಮೇಲೆ ಈಗ ಕೆಲವರು ಹೋಗುತ್ತಿದ್ದಾರೆ. ಇದು ಬಹಳ ಕಷ್ಟವಾದ ಕೆಲಸ. ಗ್ರಾಮಾಂತರ ಪ್ರದೇಶಗಳಲ್ಲಿ ಜಾಗವಿಲ್ಲ, ಮನೆ ಇಲ್ಲ, ಸ್ಥಳೀಕರು ಅವರಿಗೆ ಸರಿಯಾದ ಅನುಕೂಲವಾಡಿ ಕೊಡುವುದಿಲ್ಲ. ಇವೆಲ್ಲ ಅನೇಕ ಕಷ್ಟಗಳಿವೆ.

ಶ್ರೀ ಟಿ. ಪಿ. ಬಣಕಾರ್.—ರಟ್ಟಿ, ಹಳ್ಳಿ, ಹಿರೇಕೆರೂರು ಮುಂತಾದ ಕಡೆ ಕ್ವಾರ್ಟರ್ಸ್ ಇದ್ದರೂ ಸಹಿತ ಅವರು ಹೋಗುತ್ತಿಲ್ಲವೆನ್ನುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೇ ?

ಶ್ರೀ ಹೆಚ್. ಸಿದ್ದವೀರಪ್ಪ.—ನಾನು ಮತ್ತು ನೀವು ಕೂಡ ಆ ಬಾಗದಲ್ಲಿ ಟೂರ್ ಮಾಡಿದಾಗ ಅಲ್ಲಿನ ಸ್ಥಿತಿಯನ್ನು ನೋಡಿದ್ದೇವೆ. ಅದಕ್ಕೋಸ್ಕರವಾಗಿಯೇ ಈಗ 267 ಜನರನ್ನು ನೇಮಕ ಮಾಡಿದ್ದೇವೆ. ಅವರ ಪೈಕಿ ಈಗ 80 ಪರ್ಸೆಂಟ್‌ನಷ್ಟು ಹೋಗಿದ್ದಾರೆ. 20 ಪರ್ಸೆಂಟ್‌ನಷ್ಟು ಹೋಗುವವರಿದ್ದಾರೆ. ಆದಕಾರಣ ಪರಿಸ್ಥಿತಿ ಈಗ ಅಷ್ಟೊಂದು ಕೆಟ್ಟಿಲ್ಲ ; ಅವರನ್ನು ರೂರರ್ ಏರಿಯಾಕ್ಕೆ ಹೋಗಲೇ ಬೇಕೆಂದು ಕಮ್ಯಾಂಡ್ ಮಾಡುವುದು ಕಷ್ಟ ; ಆದಕಾರಣ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇವೆ.

Suspense Account of Bangalore City Corporation

208 **Sri T. R. SHAMANNA** (Fort)—

Will the Minister for Law and Municipal Administration be plased to state :—

(*a*) the amount held in supense accounts by the Bangalore City Corporation at the year end during the years 1971-72, 1972-73, 1973-74 to-date ;

(*b*) the steps taken to get these accounts adjusted by officers retired or transferred ;

(*c*) the action proposed to be taken to see that suspense amounts are adjusted in time ?

Sri D. K. NAIKAR (Minister for Law and Municipal Administration)—

(*a*) Statement of suspense accounts for 1971-72, 1972-73, 1973-74 and 1974-75 (upto September 1974) is placed on the Table of the House. **

(*b*) Suspense Account do not stand in the name of the officer.

(*c*) The concerned officers of the Corporation have been instructed to clear the balance still outstanding under suspense account as early as possible.

ಶ್ರೀ ಟಿ. ಆರ್. ಶಾಮಣ್ಣ.—ಈಗ ಅನೇಕ ಅಧಿಕಾರಿಗಳು ರಿಟೈರ್ ಆಗಿದ್ದಾರೆ, ಮತ್ತೆ ಕೆಲವರು ಸತ್ತು ಹೋಗಿದ್ದಾರೆ ; ಇನ್ನು ಕೆಲವರು ವರ್ಗವಾಗಿದ್ದಾರೆ. ಇಂತಹವರುಗಳ ಲೆಕ್ಕದಲ್ಲಿ ಕೋಟ್ಯಾಂತರ ರೂಪಾಯಿಗಳು ಬಾಕಿ ನಿಂತಿದೆ. ಇದನ್ನು ಸರಿದೂಗಿಸಲು ಏನು ಕ್ರಮ ತಗೆದುಕೊಂಡಿದ್ದೀರಿ ?

**Copy placed in the Karnataka Legislature Library *vide* No. 32 dated 17-3-1975.